(ಪ್ರಾಸಾ-2) ಪ್ರಮಾಣ ವಚನ ಭೋಧಿಸಿದ ದಿನಾಂಕಃ **05-11-2025**
ಮುಂದುವರೆದ ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

3. ಸದರಿ ಜಮೀನು ಸರಕಾರಿ ಜಮೀನು ಇದ್ದು ಅದನ್ನು ಅನಧಿಕೃತವಾಗಿ 2 ನೇ ಆರೋಪಿ ಶಂಕರ ರವರು ಕಲ್ಲು ಗಣಿಗಾರಿಕೆ ಮಾಡಿರುತ್ತಾರೆ. ಜಿಪಿ ಎಸ್ ಮೂಲಕ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ಮಾಡಿರುವುದು ತಿಳಿದಿರುತ್ತದೆ. 1 ನೇ ಆರೊಪಿ ಮಹಾದೇವಮ್ಮ ನವರಿಗೆ ಸರ್ವೆ ನಂಃ 38/1-5 ರಲ್ಲಿ ಪರವಾನಿಗೆ ನೀಡಿದ್ದು ಸದರಿ ಪರವಾನಿಗೆ ನೀಡಿ ಹೆಚ್ಚುವರಿ ಜಮೀನಿನಲ್ಲಿ ಕಲ್ಲು ಗಣಿಗಾರಿಕೆಮಾಡಿರುತ್ತಾರೆ. ಗಣಿ ಇಲಾಖೆಯಿಂದ ಜಿಪಿಎಸ್ ಮೂಲಕ ಅನಧಿಕೃತವಾಗಿ ಗಣಿಗಾರಿಕ ಮಾಡಿದ ಪ್ರದೇಶವನ್ನು ಅಳತೆಮಾಡಿರುತ್ತಾರೆ. ಸಾಕ್ಷಿಗೆ ನಿಪಿ 1 ನ್ನು ತೊರಿಸಿ ಸಹಿ ಗುರುತಿಸಿದ್ದು ಅದನ್ನು 1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 2 ನ್ನು ತೊರಿಸಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ

**4.** ನಾವು ಈ ಪ್ರಕರಣದಲ್ಲಿ ಸ್ಥಳಕ್ಕೆ ಬೇಟಿನೀಡಿದ ಸಮಯದಲ್ಲಿ ಉಪ ವಿಭಾಗ ಅಧಿಕಾರಿ ಯಾರಇದ್ದರೆಂದು ನೆನಪಿಲ್ಲ. ದಿಃ **21-01-2017** ರಂದು ನಮಗೆ ಮೌಖಿಕ ಆದೇಶ ಮಾಡಿರುತ್ತಾರೆ. ನಾನು ಸ್ಥಳಕ್ಕೆ ಹೊದಾಗ ಊರಿನ ಜನ ಇದ್ದು ಯಾರು ಎಂದು ಹೆಳಲು ಬರುವುದಿಲ್ಲ. ಸ್ಥಳದಲ್ಲಿ ಬುಟ್ಟಿ ಮತ್ತು ಸಲಕೆ ಇದ್ದವು. ಯಾವುದೇ ಯಂತ್ರಗಳು ಇರಲಿಲ್ಲ ಎಂದರೆ ಸರಿಯಲ್ಲ. ಬುಟ್ಟಿ ಗಣಿಗಾರಿಕೆಯಲ್ಲಿ ಊಪಯೊಗಕ್ಕೆ ಬರುವುದಿಲ್ಲ ಎಂದರೆ ಸರಿಯಲ್ಲ. ಅವುಗಳನ್ನು ಜಪ್ತಿ ಪಡಿಸಿಕೊಂಡಿಲ್ಲ ಎಂದರೆ ಸರಿ . ಪಂಚನಾಮೆಯಲ್ಲಿ ಅನಧಿಕೃತ ಗಣಿಗಾರಿಕೆ ಮಾಡಿದ ಸ್ಥಳವನ್ನು ಉದ್ದ, ಅಗಲ ಮತ್ತು ಆಳ ವನ್ನು ನಮುದಿಸಿಲ್ಲ ಎಂದರೆ ಸರಿ. ಅದರ ಚಕ್ ಬಂದಿ ಬರೆದಿಲ್ಲ ಎಂದರೆ ಸರಿ . ಕಲ್ಲು ಸಾಗಾಣಿಕೆ ಮಾಡುವುದನ್ನು ನಾನು ನೊಡಿಲ್ಲ ಎಂದರೆ ಸರಿ . ಈ ಸ್ಥಳಕ್ಕೆ ನಾನು ದಾಳಿಯ ಮುನ್ನ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ . ಅದು ಗುಡ್ಡ ಗಾಡು ಪ್ರದೇಶ ಇರುತ್ತದೆ. **1** ಮತ್ತು **2** ನೇಃ ಆರೋಪಿತರ ನಡುವಿನ ಸಂಬಂದ ನನಗೆ ಗೊತ್ತಿಲ್ಲ ಎಂದರೆ ಸರಿ . ಕಲ್ಲಿ ನ ತೂಕ ಮತ್ತು ಅದರ ಗುಣಮಟ್ಟ ಹೇಳಲು ನನಗೆ ಬರುವುದಿಲ್ಲ ಎಂದರೆ ಸರಿ.

**5.** ದಿನಾಂಕಃ **21-01-2017** ರಂದು ಸಹಾಯಕ ಆಯುಕ್ತರು ಯಾದಗಿರಿ ಅವರ ಮೌಖಿಕ ಆದೇಶದನ್ವಯ ಯಾದಗಿರಿ ತಾಲೂಕಿನ ವರ್ಕನಳ್ಳಿ ಗ್ರಾಮದ ಸರ್ವೆ ನಂ. **38/1-5** ರಲ್ಲಿ ಶಂಕರ ತಂದೆ ಶರಣಪ್ಪ ಫೋಸಿ ಹಾಗೂ ಇತರರು ನಿಯಮ ಬಾಹಿರವಾಗಿ ಕಲ್ಲುಗಣಿಗಾರಿಕೆ ಮಾಡುತ್ತಿರುವದಾಗಿ ದೂರು ಬಂದಿರುವ ಕಾರಣ ಸ್ಥಳ ಪರಿಶೀಲನೆ ಮಾಡಲು ಸೂಚಿಸಿದ ಮೇರೆಗೆ ದಿಃ **21-01-2017** ರಂದು ನಾನು ಹಾಗೂ ನನ್ನ ಸಹೋದ್ಯೋಗಿ ಎಸ್.ಎಮ್.ಕೃಷ್ಣ ಭೂ-ವಿಜ್ಞಾನಿ ಹಾಗೂ ಕಿರಣ ಭೂ-ವಿಜ್ಞಾನಿ ಎಲ್ಲರೂ ಸೇರಿ ಸದರಿ ಸರ್ವೆ ನಂಬರ ಪ್ರದೇಶಕ್ಕೆ ಬೇಟಿ ನೀಡಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಸದರಿ ಜಮೀನು ಸರಕಾರಿ ಜಮೀನು ಇದ್ದು ಅದನ್ನು ಅನಧಿಕೃತವಾಗಿ 2 ನೇ ಆರೋಪಿ ಶಂಕರ ರವರು ಕಲ್ಲು ಗಣಿಗಾರಿಕೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಿಪಿ ಎಸ್ ಮೂಲಕ ಅನಧಿಕೃತವಾಗಿ ಕಲ್ಲು ಗಣಿಗಾರಿಕೆ ಮಾಡಿರುವುದು ತಿಳಿದಿರುತ್ತದೆ. 1 ನೇ ಆರೋಪಿ ಮಹಾದೇವಮ್ಮ ನವರಿಗೆ ಸರ್ವೆ ನಂಃ 38/1-5 ರಲ್ಲಿ ಪರವಾನಿಗೆ ನೀಡಿದ್ದು ಸದರಿ ಪರವಾನಿಗೆ ನೀಡಿ ಹೆಚ್ಚುವರಿ ಜಮೀನಿನಲ್ಲಿ ಕಲ್ಲು ಗಣಿಗಾರಿಕೆಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಣಿ ಇಲಾಖೆಯಿಂದ ಜಿಪಿಎಸ್ ಮೂಲಕ ಅನಧಿಕೃತವಾಗಿ ಗಣಿಗಾರಿಕ ಮಾಡಿದ ಪ್ರದೇಶವನ್ನು ಅಳತೆಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.